# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

| ಸಂಪುಟ ೧೫೮<br>Volume 158 | ಮೈಸೂರು, **ಶುಕ್ರವಾರ,** ೨೪, ಮಾರ್ಚ್, ೨೦೨೩(**ಚೈತ್ರ,** ೦೩, ಶಕವರ್ಷ, ೧೯೪೫)<br>MYSURU, FRIDAY, 24, MARCH, 2023(CHAITRA , 03, SHAKAVARSHA, 1945) | ಸಂಚಿಕೆ ೨೪<br>Issue 24 |
|---|---|---|


## ಭಾಗ ೬ಎ

## ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

## ಅಧಿಸೂಚನೆ

## ಪೊಲೀಸ್ ಇಲಾಖೆ

ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು ಇಲ್ಲಿನ ಆಂಗ್ಲ ಮತ್ತು ಕರ್ನಾಟಕ ವಾದ್ಯಗಾರ ಹಾಗೂ ಕರ್ನಾಟಕ ವಾದ್ಯಗಾರರ ಬ್ಯಾಕ್‌ಲಾಗ್ (ಮಿಕ್ಕುಳಿದ ವೃಂದ) ಹುದ್ದೆಗಳ ನೇಮಕಾತಿ

ಸಂಖ್ಯೆ:ಸಿಬ್ಬಂದಿ/20/ಕೆಎಆರ್‌ಪಿ/2022–23, ದಿನಾಂಕ:21.03.2023.

ಸರ್ಕಾರದ ಪತ್ರ ಸಂಖ್ಯೆ:ಹೆಚ್‌ಡಿ/167/ಪಿಇಎಂ/2022(ಇ), ದಿನಾಂಕ:21.03.2023 ಮತ್ತು 23.03.2023

ವಿಷಯ : ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿಯ ಆಂಗ್ಲ ವಾದ್ಯವೃಂದ ಮತ್ತು ಕರ್ನಾಟಕ ವಾದ್ಯವೃಂದದ ವಾದ್ಯಗಾರರ ನೇಮಕಾತಿ ಹಾಗೂ ಬ್ಯಾಕ್‌ಲಾಗ್ (ಮಿಕ್ಕುಳಿದ) ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸುವ ಬಗ್ಗೆ.

* * *

1) ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿ, ಮೈಸೂರು ಇಲ್ಲಿ ಆಂಗ್ಲ ಮತ್ತು ಕರ್ನಾಟಕ ವಾದ್ಯಗಾರರ ಹುದ್ದೆಗಳಿಗೆ ನೇಮಕಾತಿಗಾಗಿ ಹಾಗೂ ಪರಿಶಿಷ್ಟ ಪಂಗಡ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳು ಲಿಪಿಕ ವೃಂದ ಸೇರಿದಂತೆ (ನೇಮಕಾತಿ) ನಿಯಮಗಳು 2004ರ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್:13:ಎಸ್‌ಬಿಸಿ:2001, ದಿನಾಂಕ:21.11.2001ರ ಅನುಸಾರ ಮತ್ತು ಸರ್ಕಾರದ ಪತ್ರದ ಸಂಖ್ಯೆ:ಹೆಚ್‌ಡಿ/167/ಪಿಇಎಂ/2022(ಇ), ದಿನಾಂಕ:21.03.2023 ರನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

2) ಅರ್ಜಿಗಳನ್ನು ಕಮಾಂಡೆಂಟ್, ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಲಲಿತಮಹಲ್ ರಸ್ತೆ, ಮೈಸೂರು–570 011 ರವರ ಕಛೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಕೊನೆಯ ದಿನಾಂಕದೊಳಗೆ ಕಛೇರಿಗೆ ತಲುಪುವಂತೆ ಕಳುಹಿಸುವುದು.

3) ಅರ್ಜಿ ಶುಲ್ಕ:

| | |
|---|---|
| ಸಾಮಾನ್ಯ ವರ್ಗ, 2(ಎ), 2(ಬಿ), 3(ಎ), 3(ಬಿ)ಗೆ ಸೇರಿದ ಅಭ್ಯರ್ಥಿಗಳಿಗೆ | 250.00 |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳಿಗೆ | 100.00 |

ನಿಗಧಿತ ಶುಲ್ಕಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್‌ನ ಅಧಿಕೃತ ಶಾಖೆಗಳಿಂದ ಡಿ.ಡಿ.ಯನ್ನು "ಕಮಾಂಡೆಂಟ್, ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು (The Commandant, K.A.R.P. Mounted Company, Mysuru) ರವರ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೆ ಯಾವುದೇ ಪರೀಕ್ಷೆ / ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಮತ್ತು ನಗದು ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.

4) ಅರ್ಜಿ ಸಲ್ಲಿಸುವ ವಿಧಾನ :

ನಿಗಧಿತ ನಮೂನೆಯ ಅರ್ಜಿ ಹಾಗೂ ಮಾಹಿತಿ / ಸೂಚನೆಗಳನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.in ನಲ್ಲಿ ಪ್ರಕಟಿಸಲಾಗಿದೆ ಹಾಗೂ ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು ಕಛೇರಿಯ ಸೂಚನಾ ಫಲಕದಲ್ಲೂ ಪ್ರಕಟಿಸಲಾಗಿರುತ್ತದೆ. ಅರ್ಜಿ ನಮೂನೆಯನ್ನು ಅಭ್ಯರ್ಥಿಗಳು ತಮ್ಮ ವೈಯಕ್ತಿಕ ಖರ್ಚಿನಲ್ಲಿ ಬೆರಳಚ್ಚು ಮಾಡಿಸಿ, ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಬಣ್ಣದ ಭಾವಚಿತ್ರ ಹಾಗೂ ಸಹಿಯೊಂದಿಗೆ ಅರ್ಜಿಯಲ್ಲಿರುವ ಎಲ್ಲಾ ವಿವರಗಳನ್ನು ಸಮರ್ಪಕವಾಗಿ ಭರ್ತಿಮಾಡಿ, ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು ರವರ ಕಛೇರಿಗೆ ಸಲ್ಲಿಸುವುದು.

- ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ:01.04.2023 ಬೆಳಿಗ್ಗೆ 10:00 ಗಂಟೆಯಿಂದ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:29.04.2023 ಸಂಜೆ 05:00 ಗಂಟೆಯವರೆಗೆ.

ಸೂಚನೆ :

ನಿಗಧಿತ ದಿನಾಂಕ ಹಾಗೂ ಸಮಯದೊಳಗೆ ಸಲ್ಲಿಸಲಾಗುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು. ಅಂಚೆ ಮೂಲಕ ಸಲ್ಲಿಸುವ ಅರ್ಜಿಗಳು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಈ ಕಛೇರಿಗೆ ತಲುಪದಿದ್ದಲ್ಲಿ, ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಸಲಾಗಿದೆ.

## ಆಂಗ್ಲ ವಾದ್ಯವೃಂದದ ವಾದ್ಯಗಾರರ ಹುದ್ದೆ :

**ಈ ಹುದ್ದೆಗೆ ಪುರುಷ ಅಭ್ಯರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ.**

ಖಾಲಿ ಹುದ್ದೆಗಳ / ವಾದ್ಯಗಳ ವರ್ಗೀಕರಣ ಕೆಳಕಂಡಂತಿದೆ. ಈ ಕೆಳಗೆ ನಮೂದಿಸಿರುವ ಖಾಲಿ ಹುದ್ದೆಗಳ / ವಾದ್ಯಗಳ ಸಂಖ್ಯೆ ತಾತ್ಕಾಲಿಕವಾಗಿದ್ದು, ಅವಶ್ಯಕತೆ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಬದಲಾವಣೆ ಮಾಡಲಾಗುವುದು.

**ಆಂಗ್ಲ ವಾದ್ಯವೃಂದದ ವಾದ್ಯಗಾರರ ಹುದ್ದೆಗೆ – 4+2* (ಬ್ಯಾಕ್‌ಲಾಗ್) ಖಾಲಿ ಹುದ್ದೆಗಳ ವರ್ಗೀಕರಣ ಕೆಳಗಿನಂತಿದೆ.**

| ವರ್ಗ | ಒಟ್ಟು ಹುದ್ದೆಗಳ ಸಂಖ್ಯೆ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ | ಕನ್ನಡ ಮಾಧ್ಯಮ | ಇತರರು |
|---|---|---|---|---|---|---|
| ಸಾಮಾನ್ಯ ವರ್ಗ | 02 | - | - | - | - | 02 |
| ಪರಿಶಿಷ್ಟ ಜಾತಿ | 01 | - | - | - | - | 01 |
| ಪರಿಶಿಷ್ಟ ಪಂಗಡ | 01 | - | - | - | - | 01 |
| ಪ್ರವರ್ಗ–1 | 01* | - | - | - | - | 01* |
| ಪ್ರವರ್ಗ–2ಎ | - | - | - | - | - | - |
| ಪ್ರವರ್ಗ–2ಬಿ | 01* | - | - | - | - | 01* |
| ಪ್ರವರ್ಗ–3ಎ | - | - | - | - | - | - |
| ಪ್ರವರ್ಗ–3ಬಿ | - | - | - | - | - | - |
| ಒಟ್ಟು | **04+02*** | **-** | **-** | **-** | **-** | **04+02*** |

* ಹಿಂದಿನ ನೇಮಕಾತಿಯಲ್ಲಿ ಮೀಸಲಿರಿಸಿದ ಪ್ರವರ್ಗದಲ್ಲಿ ಅಭ್ಯರ್ಥಿಯು ಲಭ್ಯವಿಲ್ಲದ ಕಾರಣ ಭರ್ತಿಯಾಗದೇ *(ಬ್ಯಾಕ್‌ಲಾಗ್) ಖಾಲಿ ಹುದ್ದೆಗಳು

**ಖಾಲಿ ಇರುವ ವಾದ್ಯಗಳ ವಿವರ:**

| ಕ್ರ.ಸಂ. | ವಾದ್ಯಗಳ ಹೆಸರು | ರಿಕ್ತ ಸ್ಥಾನ |
|---|---|---|
| 1 | Tenor Trombone | 01 |
| 2 | Bass Trombone | 01 |

| ಕ್ರಸಂ. | ವಾದ್ಯಗಳ ಹೆಸರು | ರಿಕ್ತ ಸ್ಥಾನ |
|---|---|---|
| 3 | $E^b$ Saxophone | 01 |
| 4 | $B^b$ Clarionet | 01 |
| 5 | Viola | 01 |
| 6 | Violin | 01 |
| | ಒಟ್ಟು | **06** |

ತಂತಿ ವಾದ್ಯದವರು ಒಂದು ಬ್ರಾಸ್ ಅಥವಾ ಒಂದು ರೀಡ್ (Bross or Reed) ವಾದ್ಯವನ್ನು ನುಡಿಸಲು ಅನುಭವ ಹೊಂದಿರಬೇಕು.

1) ಅರ್ಹತಾ ಷರತ್ತುಗಳು :

i. ಭಾರತೀಯನಾಗಿರತಕ್ಕದ್ದು.

ii. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

iii. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟುಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

2) ವಯೋಮಿತಿ :

ಅರ್ಜಿಯನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅಂದರೆ ದಿನಾಂಕ:29.04.2023ಕ್ಕೆ ಅಭ್ಯರ್ಥಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು ಹಾಗೂ 30 ವರ್ಷಗಳನ್ನು ಮೀರಿರಬಾರದು.

3) ಕನಿಷ್ಠ ವಿದ್ಯಾರ್ಹತೆ:

ಅ) ಲಂಡನ್‌ನ ಟ್ರಿನಿಟಿ ಸಂಗೀತ ಕಾಲೇಜ್‌ನ ಲಿಸ್ಸಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

ಆ) ಇದಲ್ಲದೆ, ಎಲ್ಲಾ ರೀತಿಯ ದೊಡ್ಡ ಪ್ರಮಾಣದ, ಸಣ್ಣ ಪ್ರಮಾಣದ ಮತ್ತು ಕ್ರೊಮ್ಯಾಟಿಕ್ ಸ್ಕೇಲಿನ ವಾದ್ಯಗಳ ಬಗ್ಗೆ ತಿಳುವಳಿಕೆ ಇರಬೇಕು ಹಾಗೂ ವಾದ್ಯೋಪಕರಣಗಳನ್ನು ಆ ಕ್ಷಣವೇ ಸರಾಗವಾಗಿ ನುಡಿಸುವ ಸಾಮರ್ಥ್ಯವಿರಬೇಕು.

4) ಖಾಯಂ ಪೂರ್ವ ಅವಧಿ, ವೇತನ ಶ್ರೇಣಿ ಮತ್ತು ಪಿಂಚಣಿ ಸೌಲಭ್ಯ :

ಅ) ಖಾಯಂ ಪೂರ್ವ ಅವಧಿ :

ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷ ಆರು ತಿಂಗಳು ಖಾಯಂ ಪೂರ್ವ ಅವಧಿಯಲ್ಲಿರುತ್ತಾರೆ.

ಆ) ವೇತನ ಶ್ರೇಣಿ ₹23500–550–24600–600–27000–650–29600–750–32600–850–36000–950–39800–1100–46400–1250–47650

ಇ) ಪಿಂಚಣಿ ಸೌಲಭ್ಯ :

ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ(ಎಸ್‌ಪಿಎಲ್)/04/ಪಿಇಟಿ/2005, ದಿನಾಂಕ:31.03.2006 ರಂತೆ ನೂತನ ಅಂಶದಾಯಿ ಪಿಂಚಣಿ ಸೌಲಭ್ಯ ಅನ್ವಯವಾಗುವುದು.

5) ಲಿಖಿತ ಪರೀಕ್ಷೆ :

ಅಭ್ಯರ್ಥಿಗಳಿಗೆ ಒಂದು ಗಂಟೆ ಅವಧಿಯ ಲಿಖಿತ ಪರೀಕ್ಷೆಯಿದ್ದು, ಪ್ರಶ್ನೆಪತ್ರಿಕೆಯು ಸಂಗೀತದ ವಿಷಯವಾದಂತಹ 15 ದೊಡ್ಡ ಪ್ರಮಾಣದ ಸ್ಕೇಲ್ ಮತ್ತು ಇದನ್ನು ಸೇರಿದಂತೆ ಷಾರ್ಪ್ ಮತ್ತು ಫ್ಲಾಟ್‌ನ 15 ಹಾರ್ಮೊನಿಕ್ ಸಣ್ಣ ಪ್ರಮಾಣದ ಸ್ಕೇಲ್ ಹಾಗೂ 15 ಮೆಲೋಡಿಕ್ ಸಣ್ಣ ಪ್ರಮಾಣದ ಸ್ಕೇಲ್ ಇತ್ಯಾದಿಯನ್ನು ಒಳಗೊಂಡಿರುತ್ತದೆ. ಈ ಲಿಖಿತ ಪರೀಕ್ಷೆಗೆ 50 ಅಂಕಗಳು ಇರುತ್ತದೆ. ಆದರೆ ಕನಿಷ್ಠ ಅಂಕಗಳೇನೂ ಇರುವುದಿಲ್ಲ.

6) ಪ್ರಾಯೋಗಿಕ ಪರೀಕ್ಷೆ:

ಅಭ್ಯರ್ಥಿಗಳಿಗೆ ಇಂಟರ್‌ವಲ್ ಡಾಮಿನೆಂಟ್ ಮತ್ತು ಡಿಮಿನಿಷಿಂಗ್ ಇಂಟರ್‌ವಲ್ ಮತ್ತು ಅದನ್ನು ಬರೆಯುವ ಮತ್ತು ನುಡಿಸುವ ಸಾಮರ್ಥ್ಯವಿರಬೇಕು ಹಾಗೂ ಎಲ್ಲಾ ದೊಡ್ಡ ಪ್ರಮಾಣದ, ಸಣ್ಣ ಪ್ರಮಾಣದ ಮತ್ತು ಕ್ರೊಮ್ಯಾಟಿಕ್ ಸ್ಕೇಲ್‌ಗಳ ತಿಳುವಳಿಕೆ ಇರಬೇಕು ಹಾಗೂ ಆ ಕ್ಷಣದಲ್ಲಿ ಚೆನ್ನಾಗಿ, ಸರಾಗವಾಗಿ ನೇಮಕಾತಿ ಸಮಿತಿ ಮುಂದೆ ನುಡಿಸುವ ಸಾಮರ್ಥ್ಯವಿರಬೇಕು. ಈ

ಪ್ರಾಯೋಗಿಕ ಪರೀಕ್ಷೆಯ ಅವಧಿ ಒಂದು ಗಂಟೆ ಮತ್ತು ಇದಕ್ಕೆ 50 ಅಂಕಗಳು ಇರುತ್ತದೆ. ಆದರೆ ಇದಕ್ಕೆ ಕನಿಷ್ಠ ಅಂಕಗಳೇನೂ ಇರುವುದಿಲ್ಲ.

ಲಿಖಿತ ಪರೀಕ್ಷೆ ಮತ್ತು ಪ್ರಾಯೋಗಿಕ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಧಿಸೂಚನೆಯ ಖಾಲಿ ಹುದ್ದೆಗಳಿಗೆ ವರ್ಗೀಕರಣದಂತೆ ಆಯ್ಕೆಪಟ್ಟಿ ತಯಾರು ಮಾಡಲಾಗುವುದು ಹಾಗೂ ಪೊಲೀಸ್ ವೆಬ್‌ಸೈಟ್ / ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗುವುದು.

7) ವೈದ್ಯಕೀಯ ಪರೀಕ್ಷೆ:

ಅ. <u>ದೃಷ್ಟಿ :</u>

| | ಉತ್ತಮ | | ಕನಿಷ್ಠ |
|---|---|---|---|
| 1. ದೂರದೃಷ್ಟಿ | 6/9 | ಅಥವಾ | 6/9 |
| | 6/9 | | 6/12 |
| 2. ಸಮೀಪದೃಷ್ಟಿ | 0/6 | | 0/8 |

ಪ್ರತಿ ಕಣ್ಣು ಸಂಪೂರ್ಣ ಕ್ಷೇತ್ರ ದೃಷ್ಟಿ ಹೊಂದಿರಬೇಕು. ವರ್ಣಾಂಧತೆ, ಮೆಳ್ಳಗಣ್ಣು ಅಥವಾ ಯಾವುದೇ ಕಣ್ಣಿನ ಅಥವಾ ರೆಪ್ಪೆಯ ವಿಕೃತ ಸ್ಥಿತಿಯನ್ನು ಅನರ್ಹತೆಯೆಂದು ಪರಿಗಣಿಸಲಾಗುವುದು.

ಆ. <u>ಶ್ರವಣ ಶಕ್ತಿ:</u>

1) ರಿನ್ನೇಸ್ ಪರೀಕ್ಷೆ (Rinne's Test) 2) ವೆಬ್ಬರ್ ಪರೀಕ್ಷೆ (Weber's Test)

3) ವರ್ಟಿಗೋ ಪರೀಕ್ಷೆ (Tests for Vertigo )

## <u>ಕರ್ನಾಟಕ ವಾದ್ಯವೃಂದದ ವಾದ್ಯಗಾರರ ಹುದ್ದೆ :</u>

**ಈ ಹುದ್ದೆಗೆ ಪುರುಷ ಅಭ್ಯರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ.**

ಖಾಲಿ ಹುದ್ದೆಗಳ / ವಾದ್ಯಗಳ ವರ್ಗೀಕರಣ ಕೆಳಕಂಡಂತಿದೆ. ಈ ಕೆಳಗೆ ನಮೂದಿಸಿರುವ ಖಾಲಿ ಹುದ್ದೆಗಳ / ವಾದ್ಯಗಳ ಸಂಖ್ಯೆ ತಾತ್ಕಾಲಿಕವಾಗಿದ್ದು, ಅವಶ್ಯಕತೆ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಬದಲಾವಣೆ ಮಾಡಲಾಗುವುದು.

**ಕರ್ನಾಟಕ ವಾದ್ಯವೃಂದದ ವಾದ್ಯಗಾರರ ಹುದ್ದೆಗೆ – 02+01* (ಬ್ಯಾಕ್‌ಲಾಗ್) ಖಾಲಿ ಹುದ್ದೆಗಳ ವರ್ಗೀಕರಣ ಕೆಳಗಿನಂತಿದೆ.**

| ವರ್ಗ | ಒಟ್ಟು ಹುದ್ದೆಗಳ ಸಂಖ್ಯೆ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ | ಕನ್ನಡ ಮಾಧ್ಯಮ | ಇತರರು |
|---|---|---|---|---|---|---|
| ಸಾಮಾನ್ಯ ವರ್ಗ | 01 | - | - | - | - | 01 |
| ಪರಿಶಿಷ್ಟ ಜಾತಿ | 01 | - | - | - | - | 01 |
| ಪರಿಶಿಷ್ಟ ಪಂಗಡ | - | - | - | - | - | - |
| ಪ್ರವರ್ಗ–1 | - | - | - | - | - | - |
| ಪ್ರವರ್ಗ–2ಎ | - | - | - | - | - | - |
| ಪ್ರವರ್ಗ–2ಬಿ | - | - | - | - | - | - |
| ಪ್ರವರ್ಗ–3ಎ | 01* | - | - | - | - | 01* |
| ಪ್ರವರ್ಗ–3ಬಿ | - | - | - | - | - | - |
| ಒಟ್ಟು | **02+01*** | **-** | **-** | **-** | **-** | **02+01*** |

* ಹಿಂದಿನ ನೇಮಕಾತಿಯಲ್ಲಿ ಮೀಸಲಿರಿಸಿದ ಪ್ರವರ್ಗದಲ್ಲಿ ಅಭ್ಯರ್ಥಿಯು ಲಭ್ಯವಿಲ್ಲದ ಕಾರಣ ಭರ್ತಿಯಾಗದೇ *(ಬ್ಯಾಕ್‌ಲಾಗ್) ಖಾಲಿ ಹುದ್ದೆಗಳು

1) ಅರ್ಹತಾ ಷರತ್ತುಗಳು :

1. ಭಾರತೀಯನಾಗಿರತಕ್ಕದ್ದು.
2. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.
3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

2) ವಯೋಮಿತಿ :

ಅರ್ಜಿಯನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅಂದರೆ ದಿನಾಂಕ:29.04.2023ಕ್ಕೆ ಅಭ್ಯರ್ಥಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು ಹಾಗೂ 30 ವರ್ಷಗಳನ್ನು ಮೀರಿರಬಾರದು.

3) ಕನಿಷ್ಠ ವಿದ್ಯಾರ್ಹತೆ:

1) ಕರ್ನಾಟಕ ಸಂಗೀತದಲ್ಲಿ ಸೀನಿಯರ್ ಗ್ರೇಡ್ ಪರೀಕ್ಷೆ ತೇರ್ಗಡೆಯಾಗಿರಬೇಕು.

ಅಥವಾ

ಕಾನೂನಿನ ಅನ್ವಯ ಸ್ಥಾಪಿಸಲಾಗಿರುವ ವಿಶ್ವವಿದ್ಯಾಲಯದ 'ಬಿ' ಮ್ಯೂಸಿಕ್ ಪದವಿ.

2) ಎಲ್ಲಾ ದೊಡ್ಡ ಪ್ರಮಾಣದ, ಸಣ್ಣ ಪ್ರಮಾಣದ ಹಾಗೂ ಕ್ರೊಮ್ಯಾಟಿಕ್ ಸ್ಕೇಲ್‌ಗಳ ತಿಳುವಳಿಕೆ ಇರಬೇಕು ಮತ್ತು ಕೂಡಲೇ ಸರಾಗವಾಗಿ ವಾದ್ಯ ನುಡಿಸುವ ಸಾಮರ್ಥ್ಯವಿರಬೇಕು.

4) ಖಾಯಂ ಪೂರ್ವ ಅವಧಿ, ವೇತನ ಶ್ರೇಣಿ ಮತ್ತು ಪಿಂಚಣಿ ಸೌಲಭ್ಯ :

**ಅ) ಖಾಯಂ ಪೂರ್ವ ಅವಧಿ :**
ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷ ಆರು ತಿಂಗಳು ಖಾಯಂ ಪೂರ್ವ ಅವಧಿಯಲ್ಲಿರುತ್ತಾರೆ.

**ಆ) ವೇತನ ಶ್ರೇಣಿ** : 23500–550–24600–600–27000–650–29600–750–32600–850–36000–950–39800–1100–46400–1250–47650

**ಇ) ಪಿಂಚಣಿ ಸೌಲಭ್ಯ :**
ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ(ಎಸ್‌ಪಿಎಲ್)/04/ಪಿಇಟಿ/2005, ದಿನಾಂಕ:31.03.2006 ರಂತೆ ನೂತನ ಅಂಶದಾಯಿ ಪಿಂಚಣಿ ಸೌಲಭ್ಯ ಅನ್ವಯವಾಗುವುದು.

5) ಲಿಖಿತ ಪರೀಕ್ಷೆ :

ಎಲ್ಲಾ ಅಭ್ಯರ್ಥಿಗಳಿಗೆ ಒಂದು ಲಿಖಿತ ಪರೀಕ್ಷೆಯು ಕರ್ನಾಟಕ ಶಾಸ್ತ್ರೀಯ ವಿಷಯಗಳಾದ ಶ್ರುತಿಜ್ಞಾನ, ಲಯಜ್ಞಾನ, ಮನೋಧರ್ಮ ಇತ್ಯಾದಿಗಳಿಗೆ ಇರುತ್ತದೆ. ಪ್ರಶ್ನೆಯು ಸಂಗೀತ ಪದವಿ ಪರೀಕ್ಷೆಯ ಸೀನಿಯರ್ ಗ್ರೇಡ್ ಸಂಗೀತದ ಮಟ್ಟದಲ್ಲಿರುತ್ತದೆ. ಈ ಪರೀಕ್ಷೆಯ ಅವಧಿ ಒಂದು ಗಂಟೆಯಿದ್ದು, 50 ಅಂಕಗಳಿರುತ್ತದೆ.

6) ಪ್ರಾಯೋಗಿಕ ಪರೀಕ್ಷೆ :

ಅಭ್ಯರ್ಥಿಗಳು ಶ್ರುತಿ, ಲಯ, ಮನೋಧರ್ಮ ಮತ್ತು ಶಾಸ್ತ್ರೀಯ ಸಂಗೀತದ ತಿಳುವಳಿಕೆ ಹೊಂದಿರಬೇಕು ಮತ್ತು ಕೂಡಲೇ ಸರಾಗವಾಗಿ ಸಂಗೀತವನ್ನು ನೇಮಕಾತಿ ಸಮಿತಿ ಮುಂದೆ ನುಡಿಸುವ ಸಾಮರ್ಥ್ಯವಿರಬೇಕು. ಈ ಪರೀಕ್ಷೆಯು ಒಂದು ಗಂಟೆಯದಿದ್ದು, 50 ಅಂಕಗಳಿರುತ್ತವೆ. ಆದರೆ ಕನಿಷ್ಠ ಅಂಕಗಳೇನೂ ಇರುವುದಿಲ್ಲ.

ಲಿಖಿತ ಪರೀಕ್ಷೆ ಮತ್ತು ಪ್ರಾಯೋಗಿಕ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಧಿಸೂಚನೆಯ ಖಾಲಿ ಹುದ್ದೆಗಳಿಗೆ ವರ್ಗೀಕರಣದಂತೆ ಆಯ್ಕೆಪಟ್ಟಿ ತಯಾರು ಮಾಡಲಾಗುವುದು ಹಾಗೂ ಪೊಲೀಸ್ ವೆಬ್‌ಸೈಟ್ / ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗುವುದು.

7) ವೈದ್ಯಕೀಯ ಪರೀಕ್ಷೆ:

ಅ. ದೃಷ್ಟಿ :

| | ಉತ್ತಮ | | ಕನಿಷ್ಟ |
|---|---|---|---|
| 1. ದೂರದೃಷ್ಟಿ | 6/9 | ಅಥವಾ | 6/9 |
| | 6/9 | | 6/12 |
| 2. ಸಮೀಪದೃಷ್ಟಿ | 0/6 | | 0/8 |

ಪ್ರತಿ ಕಣ್ಣು ಸಂಪೂರ್ಣ ಕ್ಷೇತ್ರ ದೃಷ್ಟಿ ಹೊಂದಿರಬೇಕು. ವರ್ಣಾಂಧತೆ, ಮೆಳ್ಳಗಣ್ಣು ಅಥವಾ ಯಾವುದೇ ಕಣ್ಣಿನ ಅಥವಾ ರೆಪ್ಪೆಯ ವಿಕೃತ ಸ್ಥಿತಿಯನ್ನು ಅನರ್ಹತೆಯೆಂದು ಪರಿಗಣಿಸಲಾಗುವುದು.

ಆ. ಶ್ರವಣ ಶಕ್ತಿ:

1) ರಿನ್ನೇಸ್ ಪರೀಕ್ಷೆ (Rinne's Test) 2) ವೆಬ್ಬರ್ ಪರೀಕ್ಷೆ (Weber's Test)

3) ವೆರ್ಟಿಗೋ ಪರೀಕ್ಷೆ (Tests for Vertigo)

**ಕರ್ನಾಟಕ ವಾದ್ಯಗಾರರ ಬ್ಯಾಕ್‌ಲಾಗ್ (ಹಿಂಬಾಕಿ) ಹುದ್ದೆಗಳಿಗೆ ಅರ್ಜಿ ಕರೆಯುವ ಬಗ್ಗೆ.**

ಬ್ಯಾಕ್‌ಲಾಗ್ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪ್ರತ್ಯೇಕವಾಗಿ ಅರ್ಜಿ ಮತ್ತು ಲಕೋಟೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗೆ ಎಂದು ನಮೂದಿಸಿ ಸಲ್ಲಿಸಬೇಕು.

**ಈ ಹುದ್ದೆಗೆ ಪುರುಷ ಅಭ್ಯರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ.**

ಖಾಲಿ ಹುದ್ದೆಗಳ / ವಾದ್ಯಗಳ ವರ್ಗೀಕರಣ ಕೆಳಕಂಡಂತಿದೆ. ಈ ಕೆಳಗೆ ನಮೂದಿಸಿರುವ ಖಾಲಿ ಹುದ್ದೆಗಳ / ವಾದ್ಯಗಳ ಸಂಖ್ಯೆ ತಾತ್ಕಾಲಿಕವಾಗಿದ್ದು, ಅವಶ್ಯಕತೆ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಬದಲಾವಣೆ ಮಾಡಲಾಗುವುದು.

**ಕರ್ನಾಟಕ ವಾದ್ಯವೃಂದದ ವಾದ್ಯಗಾರರ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಗೆ – 01 ಖಾಲಿ ಹುದ್ದೆ ವರ್ಗೀಕರಣ ಕೆಳಗಿನಂತಿದೆ.**

| ವರ್ಗ | ಒಟ್ಟು ಹುದ್ದೆಗಳ ಸಂಖ್ಯೆ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ | ಕನ್ನಡ ಮಾಧ್ಯಮ | ಇತರರು |
|---|---|---|---|---|---|---|
| ಸಾಮಾನ್ಯ ವರ್ಗ | - | - | - | - | - | - |
| ಪರಿಶಿಷ್ಟ ಜಾತಿ | - | - | - | - | - | - |
| ಪರಿಶಿಷ್ಟ ಪಂಗಡ | 01 | - | - | - | - | 01 |
| ಪ್ರವರ್ಗ–1 | - | - | - | - | - | - |
| ಪ್ರವರ್ಗ–2ಎ | - | - | - | - | - | - |
| ಪ್ರವರ್ಗ–2ಬಿ | - | - | - | - | - | - |
| ಪ್ರವರ್ಗ–3ಎ | - | - | - | - | - | - |
| ಪ್ರವರ್ಗ–3ಬಿ | - | - | - | - | - | - |
| **ಒಟ್ಟು** | **01** | **-** | **-** | **-** | **-** | **01** |

**ಕರ್ನಾಟಕ ವಾದ್ಯವೃಂದದಲ್ಲಿ ಖಾಲಿ ಇರುವ ವಾದ್ಯಗಾರರ ಹುದ್ದೆಗಳಿಗೆ ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ ವಾದ್ಯಗಳ ವಿವರ:**

| ಕ್ರ.ಸಂ. | ವಾದ್ಯಗಳ ಹೆಸರು | ರಿಕ್ತ ಸ್ಥಾನ |
|---|---|---|
| 1 | ಕ್ಲಾರಿಯೋನೆಟ್ | 01 |
| 2 | ತಬಲ (ಕರ್ನಾಟಕ ಸಂಗೀತ) | 01 |
| 3 | ದಿಲ್‌ರೂಬ | 01 |
| 4 | ಒಬೋ | 01 |
| | **ಒಟ್ಟು** | **04** |

## 1. ಅರ್ಹತಾ ಷರತ್ತುಗಳು :

1. ಭಾರತೀಯನಾಗಿರತಕ್ಕದ್ದು.

2. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

## 2. ವಯೋಮಿತಿ :

ಅರ್ಜಿಯನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅಂದರೆ ದಿನಾಂಕ:29.04.2023ಕ್ಕೆ ಅಭ್ಯರ್ಥಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು ಹಾಗೂ 40 ವರ್ಷಗಳನ್ನು ಮೀರಿರಬಾರದು.

## 3. ಕನಿಷ್ಠ ವಿದ್ಯಾರ್ಹತೆ:

1) ಕರ್ನಾಟಕ ಸಂಗೀತದಲ್ಲಿ ಸೀನಿಯರ್ ಗ್ರೇಡ್ ಪರೀಕ್ಷೆ ತೇರ್ಗಡೆಯಾಗಿರಬೇಕು.

ಅಥವಾ

ಕಾನೂನಿನ ಅನ್ವಯ ಸ್ಥಾಪಿಸಲಾಗಿರುವ ವಿಶ್ವವಿದ್ಯಾಲಯದ 'ಬಿ' ಮ್ಯೂಸಿಕ್ ಪದವಿ.

2) ಎಲ್ಲಾ ದೊಡ್ಡ ಪ್ರಮಾಣದ, ಸಣ್ಣ ಪ್ರಮಾಣದ ಹಾಗೂ ಕ್ರೊಮ್ಯಾಟಿಕ್ ಸ್ಕೇಲ್‌ಗಳ ತಿಳುವಳಿಕೆ ಇರಬೇಕು ಮತ್ತು ಕೂಡಲೇ ಸರಾಗವಾಗಿ ವಾದ್ಯ ನುಡಿಸುವ ಸಾಮರ್ಥ್ಯವಿರಬೇಕು.

## 4. ಖಾಯಂ ಪೂರ್ವ ಅವಧಿ, ವೇತನ ಶ್ರೇಣಿ ಮತ್ತು ಪಿಂಚಣಿ ಸೌಲಭ್ಯ :

ಅ) ಖಾಯಂ ಪೂರ್ವ ಅವಧಿ :
ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷ ಆರು ತಿಂಗಳು ಖಾಯಂ ಪೂರ್ವ ಅವಧಿಯಲ್ಲಿರುತ್ತಾರೆ.

ಆ) ವೇತನ ಶ್ರೇಣಿ ₹23500–550–24600–600–27000–650–29600–750–32600–850–36000–950–39800–1100–46400–1250–47650

ಇ) ಪಿಂಚಣಿ ಸೌಲಭ್ಯ :
ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ(ಎಸ್‌ಪಿಎಲ್)/04/ಪಿಇಟಿ/2005, ದಿನಾಂಕ:31.03.2006 ರಂತೆ ನೂತನ ಅಂಶದಾಯಿ ಪಿಂಚಣಿ ಸೌಲಭ್ಯ ಅನ್ವಯವಾಗುವುದು.

## 5. ಆಯ್ಕೆ ವಿಧಾನ :

ಅಭ್ಯರ್ಥಿಗಳಿಂದ ಸ್ವೀಕರಿಸಿರುವ ಅರ್ಜಿಗಳನ್ನು ಹುದ್ದೆಗೆ ನಿಗಧಿಪಡಿಸಿರುವ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುವುದು. ಅರ್ಹತಾಪಟ್ಟಿಯನ್ನು ತಯಾರಿಸುವಾಗ ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್:13:ಎಸ್‌ಬಿಸಿ:01, ದಿನಾಂಕ:21.11.2001 ರನ್ವಯ ಕನಿಷ್ಠ 29 ವರ್ಷ ವಯಸ್ಸಾಗಿರುವ ಹಾಗೂ ಗರಿಷ್ಠ 40 ವರ್ಷ ಮೀರದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು. 40 ವರ್ಷದೊಳಗಿನ ಅರ್ಹ ಅಭ್ಯರ್ಥಿಗಳು ದೊರಕದಿದ್ದಲ್ಲಿ 18 ವರ್ಷದಿಂದ 29 ವರ್ಷದೊಳಗಿನ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

## 6. ವೈದ್ಯಕೀಯ ಪರೀಕ್ಷೆ:

### ಅ. ದೃಷ್ಟಿ :

| | ಉತ್ತಮ | | ಕನಿಷ್ಟ |
|---|---|---|---|
| 1. ದೂರದೃಷ್ಟಿ | 6/9 | ಅಥವಾ | 6/9 |
| | 6/9 | | 6/12 |
| 2. ಸಮೀಪದೃಷ್ಟಿ | 0/6 | | 0/8 |

ಪ್ರತಿ ಕಣ್ಣು ಸಂಪೂರ್ಣ ಕ್ಷೇತ್ರ ದೃಷ್ಟಿ ಹೊಂದಿರಬೇಕು. ವರ್ಣಾಂಧತೆ, ಮೆಳ್ಳಗಣ್ಣು ಅಥವಾ ಯಾವುದೇ ಕಣ್ಣಿನ ಅಥವಾ ರೆಪ್ಪೆಯ ವಿಕೃತ ಸ್ಥಿತಿಯನ್ನು ಅನರ್ಹತೆಯೆಂದು ಪರಿಗಣಿಸಲಾಗುವುದು.

ಆ. ಶ್ರವಣ ಶಕ್ತಿ:

1) ರಿನ್ನೇಸ್ ಪರೀಕ್ಷೆ (Rinne's Test) 2) ವೆಬ್ಬರ್ ಪರೀಕ್ಷೆ (Weber's Test)

3) ವೆರ್ಟಿಗೋ ಪರೀಕ್ಷೆ (Tests for Vertigo )

## ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿಯ ಆಂಗ್ಲ ಮತ್ತು ಕರ್ನಾಟಕ ವಾದ್ಯವೃಂದಗಳ ವಾದ್ಯಗಾರ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ಮೀಸಲಾತಿಯ ಬಗ್ಗೆ ಇತರೆ ವಿವರಗಳು

### 1) ಜಾತಿ ಮೀಸಲಾತಿ ಪ್ರಮಾಣ ಪತ್ರಗಳು :

ಎ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರ "ನಮೂನೆ–ಡಿ"ರಲ್ಲಿ

ಬಿ) ಪ್ರವರ್ಗ–1 ವರ್ಗದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ತಹಸೀಲ್ದಾರ್ ರವರಿಂದ ಪಡೆದ ನಮೂನೆ– 'ಇ' ಪ್ರಮಾಣ ಪತ್ರ

ಸಿ) ಪ್ರವರ್ಗ–2ಎ, 2ಬಿ, 3ಎ, 3ಬಿ ವರ್ಗದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ತಹಸೀಲ್ದಾರ್ ರವರಿಂದ ಪಡದ ನಮೂನೆ – **"ಎಫ್"** ಪ್ರಮಾಣ ಪತ್ರ

ಸೂಚನೆ: "ನಮೂನೆ–ಎಫ್" ಪ್ರಮಾಣ ಪತ್ರವು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:29.04.2023ಕ್ಕೆ ಐದು ವರ್ಷಕ್ಕಿಂತ ಹಳೆಯದಾಗಿರಬಾರದು.

## ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿಯ ಆಂಗ್ಲ ಮತ್ತು ಕರ್ನಾಟಕ ಬ್ಯಾಂಡ್‌ನ ವಾದ್ಯಗಾರರ ಹುದ್ದೆಗಳ ಜೊತೆಗೆ ಬ್ಯಾಕ್‌ಲಾಗ್ ಹುದ್ದೆಗಳು ಸೇರಿ ವಾದ್ಯಗಾರರ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ಮತ್ತು ಇತರ ವಿವರಗಳು.

ಲಗತ್ತುಗಳು:

1) ಅರ್ಹತಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಸರ್ಟಿಫಿಕೇಟ್‌ಗಳ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿ. (ಅರ್ಜಿಯೊಂದಿಗೆ ಯಾವುದೇ ಮೂಲ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ. ಒಂದು ವೇಳೆ ಸಲ್ಲಿಸಿ, ಅವು ಕಳೆದುಹೋದರೆ ನೇಮಕಾತಿ ಸಮಿತಿಯು ಜವಾಬ್ದಾರಿಯಾಗುವುದಿಲ್ಲ.)

2) ಹುಟ್ಟಿದ ದಿನಾಂಕದ ಪ್ರಮಾಣ ಪತ್ರದ ಬಗ್ಗೆ (ಎಸ್.ಎಸ್.ಎಲ್.ಸಿ. ಅಥವಾ ವರ್ಗಾವಣೆ ಪತ್ರ (T.C.) ಅಥವಾ ಇತರ ದಾಖಲಾತಿಗಳ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರಮಾಣ ಪತ್ರ)

3) 05/– ಅಂಚೆ ಚೀಟಿಯನ್ನು ಹಚ್ಚಿದ ಎರಡು ಲಕೋಟೆ 9"X4" (Envelope) ಯಲ್ಲಿ ನಿಮ್ಮ ಖಾಯಂ ಅಂಚೆಯ ವಿಳಾಸವನ್ನು ಬರೆದು ಅರ್ಜಿಯೊಂದಿಗೆ ಲಗತ್ತಿಸುವುದು.

4) ಅರ್ಜಿಯಲ್ಲಿ ಫೋಟೋ ಅಂಟಿಸಲು ನಿಗಧಿಪಡಿಸಿರುವ ಜಾಗದಲ್ಲಿ ನಿಮ್ಮ ಇತ್ತೀಚಿನ (06 ತಿಂಗಳೊಳಗಿನ) ಭಾವಚಿತ್ರವನ್ನು ಅಂಟಿಸಿ ಅದರ ಮೇಲೆ ಪೂರ್ಣ ಸಹಿ ಮಾಡುವುದು.

5) ಯಾವುದೇ ಪ್ರವರ್ಗದ ಅಡಿಯಲ್ಲಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವವರು ಜಾತಿ ಪ್ರಮಾಣ ಪತ್ರದ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸತಕ್ಕದ್ದು.

6) ಮಾಜಿ ಸೈನಿಕರಾಗಿದ್ದಲ್ಲಿ ಸಂಬಂಧಪಟ್ಟ ಘಟಕದಿಂದ ಡಿಸ್‌ಚಾರ್ಜ್ ಪ್ರಮಾಣ ಪತ್ರ (ಅನ್ವಯಿಸಿದಲ್ಲಿ) (ಸ್ವಯಂ ದೃಢೀಕೃತ ಜೆರಾಕ್ಸ್ ಪ್ರಮಾಣ ಪತ್ರ)

7) ದೃಢೀಕೃತ ಆಧಾರ್‌ಕಾರ್ಡ್ ಪ್ರತಿ ಲಗತ್ತಿಸುವುದು.

**ವಿಶೇಷ ಸೂಚನೆಗಳು :**

1) ಅರ್ಜಿ ಸಲ್ಲಿಸುವವರು ಲಕೋಟೆಯ ಮೇಲೆ ಯಾವ ಹುದ್ದೆಗೆ ಮತ್ತು ಯಾವ ವಾದ್ಯಕ್ಕೆ ಅರ್ಜಿ ಸಲ್ಲಿಸುವರೋ ಆ ಹುದ್ದೆಗೆ (ಆಂಗ್ಲ ವಾದ್ಯಗಾರ ಹುದ್ದೆಗೆ / ಕರ್ನಾಟಕ ವಾದ್ಯಗಾರ ಹುದ್ದೆಗೆ / ಕರ್ನಾಟಕ ವಾದ್ಯಗಾರರ ಬ್ಯಾಕ್‌ಲಾಗ್ ಹುದ್ದೆಗೆ – ________ ವಾದ್ಯಕ್ಕೆ ಎಂದು) ಬರೆಯಬೇಕು. ಪ್ರತಿಯೊಂದಕ್ಕೂ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು.

2) ಬ್ಯಾಕ್‌ಲಾಗ್ ಹುದ್ದೆಗೆ (ಪರಿಶಿಷ್ಟ ಪಂಗಡ) ಕನಿಷ್ಟ 29 ವರ್ಷ ವಯಸ್ಸಾಗಿರುವ ಹಾಗೂ ಗರಿಷ್ಟ 40 ವರ್ಷ ಮೀರಿರದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು. 29 ವರ್ಷದಿಂದ 40 ವರ್ಷದೊಳಗಿನ ಅರ್ಹ ಅಭ್ಯರ್ಥಿಗಳು ದೊರಕದಿದ್ದಲ್ಲಿ 18 ವರ್ಷದಿಂದ 29 ವರ್ಷದೊಳಗಿನ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

3) ಅರ್ಹ ಅಭ್ಯರ್ಥಿಗಳು ಮೂಲ ದಾಖಲಾತಿಗಳ ಪರಿಶೀಲನಾ ಸಂದರ್ಭದಲ್ಲಿ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಗಳಿಗೆ ಪೂರಕವಾಗಿ ಸದರಿ ದಾಖಲಾತಿ / ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸಬೇಕು. ಇಲ್ಲದಿದ್ದಲ್ಲಿ ಸದರಿ ಸೌಲಭ್ಯಗಳನ್ನು ಅಭ್ಯರ್ಥಿಗಳು ಕಳೆದುಕೊಳ್ಳುತ್ತಾರೆ. ಆದರೆ ಅರ್ಜಿಯೊಂದಿಗೆ ಯಾವುದೇ ಮೂಲ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ.

4) ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೆ ಮೊದಲು ಅಭ್ಯರ್ಥಿಗಳು ಹುದ್ದೆಗೆ ನಿಗದಿಪಡಿಸಿದ ಶೈಕ್ಷಣಿಕ ಕನಿಷ್ಟ ವಿದ್ಯಾರ್ಹತೆಯನ್ನು ಹೊಂದಿರಲೇಬೇಕು.

5) ಪರೀಕ್ಷೆಗೆ ಪ್ರವೇಶವು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ. ಪ್ರವೇಶ ಪತ್ರ ನೀಡಿದ ಮಾತ್ರಕ್ಕೆ ನೇಮಕಾತಿ ಸಮಿತಿಯು ನಿಮ್ಮ ಅಭ್ಯರ್ಥಿತನವನ್ನು ಅಂಗೀಕರಿಸಿದೆ ಎಂದು ಭಾವಿಸತಕ್ಕದ್ದಲ್ಲ. ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಜೆರಾಕ್ಸ್ ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಸಲಹೆ ನೀಡಿದೆ.

6) ಅಭ್ಯರ್ಥಿಗಳು ನೇಮಕಾತಿ ಸಮಿತಿಯು ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿಯೇ ಎಲ್ಲಾ ಅಂಕಣಗಳನ್ನು ಸ್ಪಷ್ಟವಾಗಿ ಭರ್ತಿ ಮಾಡತಕ್ಕದ್ದು. ಇತರೆ ಯಾವುದೇ ನಮೂನೆಗಳಲ್ಲಿ ಸಲ್ಲಿಸುವ, ಶುಲ್ಕ ಪಾವತಿಸದೇ ಸಲ್ಲಿಸಲ್ಪಡುವ, ಅಪೂರ್ಣವಾಗಿರುವ, ಸಹಿ ಮಾಡದ, ನಿಗಧಿಪಡಿಸಿರುವ ಅರ್ಹತೆಯನ್ನು ಹೊಂದದೇ ಇರುವ ಹಾಗೂ ಭಾವಚಿತ್ರ ಇಲ್ಲದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅರ್ಜಿ ತಿರಸ್ಕೃತವಾದಲ್ಲಿ ತತ್ಸಂಬಂಧ ಯಾವುದೇ ರೀತಿಯ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ.

7) ಲಿಖಿತ ಪರೀಕ್ಷೆ, ಪ್ರಾಯೋಗಿಕ ಪರೀಕ್ಷೆಗಳನ್ನು ಮೈಸೂರು ನಗರದಲ್ಲೇ ನಡೆಸಲಾಗುವುದು. ಇವುಗಳು ನಡೆಯುವ ಸ್ಥಳ, ದಿನಾಂಕ, ವೇಳೆಯನ್ನು ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ಪೊಲೀಸ್ ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.in ನಲ್ಲಿ ಪ್ರಕಟಿಸಲಾಗುವುದು.

8) ಪ್ರಶ್ನೆಪತ್ರಿಕೆಯಲ್ಲಿ ಯಾವುದಾದರೂ ಮುದ್ರಣ ದೋಷವಾಗಿದ್ದಲ್ಲಿ ಅದನ್ನು ತಕ್ಷಣ ಪರಿವೀಕ್ಷಕರ ಗಮನಕ್ಕೆ ತರುವುದು. ಇದರ ಬಗ್ಗೆ ಪರೀಕ್ಷೆ ಮುಗಿದ ನಂತರ ನೇಮಕಾತಿ ಸಮಿತಿಗೆ ಸದರಿ ವಿಷಯದ ಬಗ್ಗೆ ತಿಳಿಸಿದಲ್ಲಿ ಅದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

9) ಕರ್ನಾಟಕ ರಾಜ್ಯದ, ಕೇಂದ್ರ ಸರ್ಕಾರದ ಯಾವುದೇ ಸರ್ಕಾರಿ ಹಾಗೂ ಅರೆ ಸರ್ಕಾರಿ ಸಂಸ್ಥೆಯ ಸೇವೆಯಿಂದ ವಜಾಗೊಂಡಿರುವ ನೌಕರರು ನೇಮಕಾತಿಗೆ ಅರ್ಹರಲ್ಲ.

10) ಸುಳ್ಳು ಮಾಹಿತಿ ಅಥವಾ ನಕಲಿ ಪ್ರಮಾಣ ಪತ್ರ / ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆಯುವುದು, ಯಾವುದೇ ಸಂದರ್ಭದಲ್ಲಿ ಕಂಡುಬಂದಲ್ಲಿ, ಅದೇ ಹಂತದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೆ ಅವರ ಅಭ್ಯರ್ಥಿತನವನ್ನು ರದ್ದುಗೊಳಿಸುವುದರ ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.

11) ಅಭ್ಯರ್ಥಿಯು ಹುದ್ದೆಗೆ ಅರ್ಜಿ ಸಲ್ಲಿಸಿದ ತಕ್ಷಣ ತಾನು ನಿಯಮ ಮತ್ತು ಅಧಿನಿಯಮಗಳಿಗೆ (Rules & Regulations) ಬದ್ಧನಾಗಿರುತ್ತಾನೆ ಎಂದು ಭಾವಿಸಲಾಗಿರುತ್ತದೆ. ಒಂದು ವೇಳೆ ತಾನು ಸದರಿ ಹುದ್ದೆಗೆ ಆಯ್ಕೆಯಾಗದ ಪಕ್ಷದಲ್ಲಿ ತದನಂತರ ಅದೇ ನಿಯಮಗಳನ್ನು ಪ್ರಶ್ನಿಸಲು ಬರುವುದಿಲ್ಲ.

12) ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ) ನಿಯಮಗಳು 1977ರಲ್ಲಿ ನಿರ್ದಿಷ್ಟಗೊಳಿಸಿರುವಂತೆ ಆಯ್ಕೆಯಾದ ಅಭ್ಯರ್ಥಿಯು ನೇಮಕಾತಿ ಆದೇಶ ನೀಡುವ ಮುನ್ನ ಪೂರ್ಣ ಪ್ರಮಾಣದ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ. ವೈದ್ಯಕೀಯ ಪರೀಕ್ಷೆಯಲ್ಲಿ ವಿಫಲರಾದ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು.

**ಸಹಿ/–**
**ಅಧ್ಯಕ್ಷರು,**
**ಕರ್ನಾಟಕ ಸರ್ಕಾರ ಪೊಲೀಸ್ ವಾದ್ಯ ಸಲಹಾ**
**ಮಂಡಳಿ ಸಮಿತಿ ಹಾಗೂ ಪೊಲೀಸ್ ಆಯುಕ್ತರು,**
**ಮೈಸೂರು ನಗರ.**

(ಪ.ಜಾ/ಪ.ಪಂ ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ – ಡಿ
(ನಿಯಮ 3ಎ (2) (3) ನೋಡಿ)
ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ /ಪ.ಪಂ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ

ಪ್ರಮಾಣ ಪತ್ರ

................................................................ ರಾಜ್ಯದ / ಕೇಂದ್ರಾಡಳಿತ ಪ್ರದೇಶದ * ....................................... ಜಿಲ್ಲೆಯ/ ವಿಭಾಗದ ................................................ ಗ್ರಾಮ / ಪಟ್ಟಣದ * ನಿವಾಸಿಯಾದ ಶ್ರೀ / ಶ್ರೀಮತಿ ............................... ಎಂಬುವವರ ಮಗ / ಮಗಳಾದ ಶ್ರೀ / ಶ್ರೀಮತಿ ........................................................ ಇವರು ಅನುಸೂಚಿತ ಜಾತಿ / ಅನುಸೂಚಿತ ಬುಡಕಟ್ಟು * ಎಂದು ಮಾನ್ಯ ಮಾಡಲಾಗಿರುವ ಜಾತಿ / ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

* ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ರಾಜ್ಯ ಪುನರ್ ರಚನಾ ಅಧಿ ನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971ರ ಮೂಲಕ ತಿದ್ದುಪಡಿಯಾದಂತೆ).

* ಸಂವಿಧಾನ
* ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956
* ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ತಿದ್ದುಪಡಿಯಾದಂತೆ ಸಂವಿದಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959.
* ಸಂವಿಧಾನ (ದಾದರ್ ಮತ್ತು ನಗರ ಹವೇಲಿ) ಅನುಸೂಚಿತ ಜಾತಿಗಳ ಆದೇಶ, 1962
* ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967
* ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ / ಬುಡಕಟ್ಟುಗಳ ಆದೇಶ 1988
* ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

2. ಶ್ರೀ / ಶ್ರೀಮತಿ / ಕುಮಾರಿ* .................................................................................................................................. ಮತ್ತು / ಅಥವಾ ಅವನ* / ಅವಳ* ಕುಟುಂಬವು ............................................................................................... ರಾಜ್ಯ / ಕೇಂದ್ರಾಡಳಿತ ಪ್ರದೇಶದ ................................................ ಜಿಲ್ಲಾ / ವಿಭಾಗದ .......................................... ಗ್ರಾಮ / ಪಟ್ಟಣದ ಸಾಮಾನ್ಯ ನಿವಾಸಿ (ಗಳು)

ಸಹಿ ..................................................
ತಹಶೀಲ್ದಾರರು ..................................................

ಸ್ಥಳ : ಪದನಾಮ
ದಿನಾಂಕ : ಕಛೇರಿಯ ಮೊಹರಿನೊಂದಿಗೆ

ರಾಜ್ಯ / ಕೇಂದ್ರಾಡಳಿತ ಪ್ರದೇಶ*

ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟು ಬಿಡಿ / ಹೊಡೆದು ಹಾಕಿ

ಸೂಚನೆ : ಇಲ್ಲಿ ಉಪಯೋಗಿಸಿದ **"ಸಾಮಾನ್ಯ ನಿವಾಸಿಗಳೂ"** ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950ರ 20ನೇಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ. ಭಾರತ ಸರ್ಕಾರದ ಪತ್ರ ಸಂಖ್ಯೆ. ಬಿಸಿ 12028 / 2/ 76–ಎಸ್‌ಸಿಟಿ–1 ಗೃಹ ಮಂತ್ರಾಲಯದ ಅನುಸಾರವಾಗಿ, ಅಂಥ ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮವಾಗಿರುವುದಕ್ಕಾಗಿ, ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ) ಪತ್ರ ಸಂಖ್ಯೆ 13.02.74 ಇಎಸ್‌ಟಿ (ಎಸ್‌ಸಿಟಿ) ದಿನಾಂಕ 5ನೇ ಆಗಸ್ಟ್ 1975ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು, ತನ್ನ ಖಾಯಂ ವಾಸ ಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು. ಅದೇ ರೀತಿಯಲ್ಲಿ, ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಿಯು ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗುವುದಿಲ್ಲ.

(ಪ್ರವರ್ಗ – 1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ – ಇ
(ನಿಯಮ 3ಎ (2) (3) ನೋಡಿ)

ಹಿಂದುಳಿದ ವರ್ಗಗಳಿಗೆ (ಪ್ರ.ವರ್ಗ–1) ಸೇರಿದ ಅಭ್ಯರ್ಥಿಗೆ ನೀಡುವ ಪ್ರಮಾಣ ಪತ್ರ

........................................................................ ಗ್ರಾಮ / ಪಟ್ಟಣದ / ನಗರ ನಿವಾಸಿಯಾದ ಶ್ರೀ

/ ಶ್ರೀಮತಿ ........................................................................ ಇವರ ಮಗ / ಮಗಳು / ಪತ್ನಿ / ಪತಿಯಾದ ಶ್ರೀ / ಶ್ರೀಮತಿ

........................................................................ ಇವರು ಹಿಂದುಳಿದ ವರ್ಗಗಳ (ಪ್ರವರ್ಗ) ................................................ ಜಾತಿಯ

...................................................... ಉಪ ಜಾತಿಗೆ

ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ :
ದಿನಾಂಕ :

ತಹಶೀಲ್ದಾರರು
ತಾಲ್ಲೂಕು ಕಛೇರಿಯ ಮೊಹರು

(ಪ್ರವರ್ಗ – 2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ – ಎಫ್

(ನಿಯಮ 3ಎ (2) (3)ನ್ನು ನೋಡಿ)

ಹಿಂದುಳಿದ ವರ್ಗಗಳಿಗೆ (2ಎ, 2ಬಿ, 3ಎ, 3ಬಿ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಆದಾಯ ಮತ್ತು
ಜಾತಿ ಪ್ರಮಾಣ ಪತ್ರ

.................................................................. ರಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ ................................................. ಇವರ ಮಗ / ಮಗಳು / ಪತಿ / ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ ................................................. ಇವರು ಮತ್ತು ಆತನ / ಅವಳ ತಂದೆ / ತಾಯಿ / ಪೋಷಕರು/ಪತ್ನಿ/ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ. ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ:30.03.2002ರಲ್ಲಿ

ನಿರ್ದಿಷ್ಟ ಪಡಿಸಿದ ಮೇಲುಸ್ತರದ (ಕ್ರಿಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ;

ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ ತಾಯಿ/ಪೋಷಕರಾಗಲಿ / ಪತ್ನಿ / ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು ;

ಅಥವಾ

ಸಾರ್ವಜನಿಕ ವಲಯ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ ;

ಅಥವಾ

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ₹11400–21600/–ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು

ಅಥವಾ

ಆತನ/ಆಕೆಯ ತಂದೆ ತಾಯಿ/ಪೋಷಕರು/ಪತ್ನಿ/ಪತಿಯ ಆದಾಯವು ಎರಡು ಲಕ್ಷ ಮೀರುವುದಿಲ್ಲವೆಂದು ;

ಅಥವಾ

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರಲ್ಲಿ ನಿಗದಿಪಡಿಸಿರುವಂತೆ ಆತನ/ಆಕೆಯ ತಂದೆ ತಾಯಿ/ಪೋಷಕರು/ಪತ್ನಿ/ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ/ಆಕೆಯ ತಂದೆ ತಾಯಿ/ಪೋಷಕ/ಪತ್ನಿ/ಪತಿಯು ಅಥವಾ ಇವರಿಬ್ಬರೂ 10 ಯುನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ. ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ 30.03.2002ರ ಅನ್ವಯ

ಶ್ರೀ/ಶ್ರೀಮತಿ/ಕುಮಾರಿ .................................. ಇವರು ....................................... ಜಾತಿಗೆ ......................................... ಸೇರಿದ ಉಪಜಾತಿಯವರಾಗಿದ್ದು ಸರ್ಕಾರಿ ಆದೇಶ ಸಂಖ್ಯೆ. ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ 30.03.2002ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ ............................... (2ಎ, 2ಬಿ, 3ಎ, 3ಬಿ) ಸೇರಿರುತ್ತಾರೆ.

ಸ್ಥಳ :
ದಿನಾಂಕ : .

ತಹಶೀಲ್ದಾರರು
........................... ತಾಲ್ಲೂಕು
ಕಛೇರಿಯ ಮೊಹರು

| ಭಾವಚಿತ್ರ |
|---|

**ಕರ್ನಾಟಕ ರಾಜ್ಯ ಪೊಲೀಸ್**
**ಕಮಾಂಡೆಂಟ್‌ರವರ ಕಚೇರಿ, ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ,**
**ಲಲಿತಮಹಲ್ ರಸ್ತೆ, ಮೈಸೂರು–570 011.**

---

## ಆಂಗ್ಲ ಮತ್ತು ಕರ್ನಾಟಕ ವಾದ್ಯಗಾರರ ಹಾಗೂ ಕರ್ನಾಟಕ ವಾದ್ಯಗಾರರ ಬ್ಯಾಕ್‌ಲಾಗ್ (ಮಿಕ್ಕುಳಿದ) ಹುದ್ದೆಗಳ ನೇಮಕಾತಿ – ಅರ್ಜಿ ನಮೂನೆ

**ಅಧಿಸೂಚನೆ ಸಂಖ್ಯೆ:ಸಿಬ್ಬಂದಿ/20/ಕೆಎಆರ್‌ಪಿ/2022–23** **ದಿನಾಂಕ:21.03.2023**

**ಯಾವ ಹುದ್ದೆಗಾಗಿ ಅರ್ಜಿ :** ಆಂಗ್ಲ / ಕರ್ನಾಟಕ ವಾದ್ಯಗಾರ / ಕರ್ನಾಟಕ ವಾದ್ಯವೃಂದದ ಬ್ಯಾಕ್‌ಲಾಗ್ ಹುದ್ದೆ

**ಯಾವ ವಾದ್ಯ :**

| ಕ್ರ.ಸಂ. | ಒದಗಿಸಬೇಕಾದ ಮಾಹಿತಿ | ಅಭ್ಯರ್ಥಿಯ ವಿವರ |
|---|---|---|
| 1. | ಅಭ್ಯರ್ಥಿಯ ಪೂರ್ಣ ಹೆಸರು<br>(ದಪ್ಪವಾಗಿ ಬಿಡಿ ಅಕ್ಷರಗಳಲ್ಲಿ ಬರೆಯಬೇಕು) | |
| 2. | ತಂದೆಯ ಹೆಸರು ಮತ್ತು ವೃತ್ತಿ | |
| 3. | ಅಭ್ಯರ್ಥಿಯ ಪೂರ್ಣ ವಿಳಾಸ<br>(ಅಂಚೆಯ ಪಿನ್‌ಕೋಡ್ ಮತ್ತು ದೂರವಾಣಿ ಸಂಖ್ಯೆ ತಪ್ಪದೆ ನಮೂದಿಸಿ) | |
| 4. | ಜನ್ಮ ದಿನಾಂಕ (ಎಸ್.ಎಸ್.ಎಲ್.ಸಿ./ ಟಿ.ಸಿ.ಯಲ್ಲಿರುವ ಪ್ರಕಾರ ಹಾಗೂ ಈ ಬಗ್ಗೆ ಸೂಕ್ತ ದಾಖಲಾತಿ ಒದಗಿಸುವುದು) | |
| 5. | ಸಂಗೀತ ವಿದ್ಯಾರ್ಹತೆ (ಸಂಗೀತ ವಿದ್ಯಾರ್ಹತೆಯ ಬಗ್ಗೆ ಸೂಕ್ತ ದಾಖಲಾತಿ ಒದಗಿಸುವುದು) | |
| 6. | ಜನ್ಮಸ್ಥಳ, ತಾಲ್ಲೂಕು, ಜಿಲ್ಲೆ, ರಾಜ್ಯ<br>(ಪೂರ್ಣ ಮಾಹಿತಿಗಾಗಿ) | |
| 7. | ಜಾತಿ : ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಅಥವಾ ಇತರೆ ವರ್ಗಕ್ಕೆ ಸೇರಿದ್ದರ ಬಗ್ಗೆ<br>(ಸೂಕ್ತ ಪ್ರಾಧಿಕಾರದಿಂದ ಪಡೆದಿರುವ ಇತ್ತೀಚಿನ ಪ್ರಮಾಣಪತ್ರ ನಿಗಧಿತ ನಮೂನೆಯಲ್ಲಿ ದೃಢೀಕರಿಸಿ ಲಗತ್ತಸಬೇಕು) | |
| 8. | ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ವಯಸ್ಸು<br>ವರ್ಷ ತಿಂಗಳು ದಿನಾಂಕ | |
| 9. | ಯಾವ ಹುದ್ದೆಗೆ ಅರ್ಜಿ ಸಲ್ಲಿಸುತ್ತಿದಾರೆ<br>(ಆಂಗ್ಲ / ಕರ್ನಾಟಕ ವಾದ್ಯಗಾರ / ಕರ್ನಾಟಕ ವಾದ್ಯವೃಂದದ ಬ್ಯಾಕ್‌ಲಾಗ್) | |
| 10. | ಯಾವ ವಾದ್ಯೋಪಕರಣದ (Instrument) ಹುದ್ದೆಗೆ ಅರ್ಜಿ ಸಲ್ಲಿಸುತ್ತಿದ್ದೀರಿ | |

| | | |
|---|---|---|
| 11. | **ಆಧಾರ್ ಕಾರ್ಡ್ ಸಂಖ್ಯೆ (ದೃಢೀಕೃತ ಪ್ರತಿ ಲಗತ್ತಿಸುವುದು)** | |
| 12. | **ನುಡಿಸುವ ವಾದ್ಯದ ಅನುಭವದ ಮಾಹಿತಿ ನೀಡಿ** | |
| 13. | **ಬ್ಯಾಂಕ್ ಡಿ.ಡಿ.ಸಂಖ್ಯೆ, ದಿನಾಂಕ ಮತ್ತು ಪಾವತಿಸಿದ ಮೊತ್ತದ ಹಾಗೂ ಬ್ಯಾಂಕ್ ವಿವರ** | |

## ಘೋಷಣೆ

1. ಅರ್ಜಿಯಲ್ಲಿ ತಿಳಿಸಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಾನು ನಂಬುವಷ್ಟರ ಮಟ್ಟಿಗೆ ನಿಜವೆಂದು, ಪೂರ್ಣವೆಂದು ಮತ್ತು ಸರಿಯಿದೆಯೆಂದು ಈ ಮೂಲಕ ಘೋಷಿಸುತ್ತೇನೆ. ನಾನು ನೀಡಲಾದ ಯಾವುದೇ ಮಾಹಿತಿಯು ಪರೀಕ್ಷೆ/ ನೇಮಕಾತಿ ಮುಂಚೆ, ನಡೆಯುವಾಗ ಅಥವಾ ತರುವಾಯ ಸುಳ್ಳು/ತಪ್ಪೆಂದು ಕಂಡುಬಂದ ಸಂದರ್ಭದಲ್ಲಿ ಅಥವಾ ಅನರ್ಹತೆ ಪತ್ತೆಯಾದ ಸಂದರ್ಭದಲ್ಲಿ ನೇಮಕಾತಿ ಸಮಿತಿಯು ನನ್ನ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಬಹುದೆಂದು ನನಗೆ ತಿಳಿದಿರುತ್ತದೆ.
2. ನಾನು ಅಧಿಸೂಚನೆಯಲ್ಲಿ ನಮೂದಿಸಿರುವ ನಿಯಮ ಮತ್ತು ವಿನಿಮಯಗಳನ್ನು ಹಾಗೂ ಎಲ್ಲಾ ಷರತ್ತುಗಳನ್ನು ಜಾಗರೂಕತೆಯಿಂದ ಓದಿರುತ್ತೇನೆ ಮತ್ತು ಅವುಗಳಿಗೆ ಬದ್ಧನಾಗಿದ್ದು, ಕಟ್ಟುನಿಟ್ಟಾಗಿ ಪಾಲಿಸುತ್ತೇನೆಂದು ಘೋಷಿಸುತ್ತೇನೆ. ನಾನು ಅರ್ಜಿ ಸಲ್ಲಿಸಿದ ಹುದ್ದೆಯ ನೇಮಕಾತಿ ನಿಗಧಿಪಡಿಸಿದ ವಯೋಮಿತಿ, ವಿದ್ಯಾರ್ಹತೆ ಮುಂತಾದ ಇತರೆ ಎಲ್ಲಾ ಅರ್ಹತಾ ಷರತ್ತುಗಳನ್ನು ಪೂರೈಸಿರುತ್ತೇನೆ. ನಾನು ಈ ಪ್ರಕ್ರಿಯೆಯಲ್ಲಿ ಹಾಜರಾಗಲು ಈ ಹಿಂದೆ ಉಚ್ಚಾಟಿಸಲ್ಪಟ್ಟಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.
3. ನಾನು ಈ ಹುದ್ದೆಯ ಆಯ್ಕೆಯ ಸಲುವಾಗಿ ಅರ್ಜಿ ಸಲ್ಲಿಸುತ್ತಿರುವುದು ಈ ಹುದ್ದೆಯ ನಿಯಮ ಮತ್ತು ವಿನಿಮಯಗಳನ್ನು ಒಪ್ಪಿಕೊಂಡಂತೆ ಆಗಿರುತ್ತದೆಂದು ನನಗೆ ಸಂಪೂರ್ಣವಾಗಿ ತಿಳಿದಿರುತ್ತದೆ. ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಆಯ್ಕೆಯಾಗದಿದ್ದಲ್ಲಿ, ಪಾಲ್ಗೊಂಡಿರುವ ಈ ನೇಮಕಾತಿ ನಿಯಮ ಮತ್ತು ವಿನಿಮಯಗಳನ್ನು ಪ್ರಶ್ನಿಸುವುದಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ: ಅಭ್ಯರ್ಥಿಯ ಸಹಿ

# ತಪಾಸಣಾ ಪಟ್ಟಿ

**ಅಭ್ಯರ್ಥಿಗಳು ಅರ್ಜಿಯ ಎಲ್ಲಾ ಅಂಶಗಳನ್ನು ಪೂರ್ಣ ಭರ್ತಿ ಮಾಡಲಾಗಿದೆ ಎಂದು ಖಚಿತಪಡಿಸಿಕೊಳ್ಳುವುದಕ್ಕಾಗಿ ಅರ್ಜಿಯನ್ನು ಸಲ್ಲಿಸುವ ಮೊದಲು ಅರ್ಜಿ ಹಾಗೂ ಅದರ ಅಡಕಗಳಲ್ಲಿ ನೀಡಿದ ವಿವರಗಳನ್ನು ತಪಾಸಣಾ ಪಟ್ಟಿಯ ಈ ಕೆಳಗಿನವುಗಳೊಂದಿಗೆ ಪರಿಶೀಲಿಸುವಂತೆ ಅಭ್ಯರ್ಥಿಗಳಿಗೆ ಸಲಹೆ ಮಾಡಲಾಗಿದೆ.**

| ಕ್ರ.ಸಂ. | ವಿವರ | ಅಭ್ಯರ್ಥಿಯು ಭರ್ತಿ ಮಾಡುವುದು (ಹೌದು / ಇಲ್ಲ) | ಕಚೇರಿಯ ಉಪಯೋಗಕ್ಕೆ ಮಾತ್ರ |
|---|---|---|---|
| 1 | ನಿಗಧಿತ ಪರೀಕ್ಷಾ ಶುಲ್ಕವನ್ನು ಡಿ.ಡಿ. ಮೂಲಕ ಪಾವತಿಸಲಾಗಿದೆಯೇ? | | |
| 2 | ಅಭ್ಯರ್ಥಿಯು ಅರ್ಜಿಯನ್ನು ಸಂಪೂರ್ಣವಾಗಿ ಭರ್ತಿ ಮಾಡಿ ಸಹಿ ಮತ್ತು ದಿನಾಂಕವನ್ನು ಮಾಡಲಾಗಿದೆಯೇ? | | |
| 3 | ಅರ್ಜಿಯಲ್ಲಿ ಭಾವಚಿತ್ರವನ್ನು ಅಂಟಿಸಿದೆಯೇ? | | |
| 4 | ಹುಟ್ಟಿದ ದಿನಾಂಕವನ್ನು ರುಜುವಾತುಪಡಿಸಲು ದೃಢೀಕೃತ ದಾಖಲಾತಿ ಲಗತ್ತಿಸಿದೆಯೇ? (ಎಸ್.ಎಸ್.ಎಲ್.ಸಿ. / ಟಿ.ಸಿ.) | | |
| 5 | **ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ವಯಸ್ಸು:**<br><br>**ದಿನ ತಿಂಗಳು ವರ್ಷ** | | |
| 6 | ಅಧಿಸೂಚನೆಯನ್ವಯ ವಯೋಮಿತಿಯೊಳಗಿರುತ್ತಾರೆಯೇ? | | |
| 7 | ವರ್ಗ ಮೀಸಲಾತಿ ಸೌಲಭ್ಯ ಪಡೆಯುವವರು ದೃಢೀಕೃತ ಜಾತಿ ಪ್ರಮಾಣಪತ್ರವನ್ನು ಲಗತ್ತಿಸಲಾಗಿದೆಯೇ? | | |
| 8 | ಸಂಗೀತ ವಿದ್ಯಾರ್ಹತೆ ಬಗ್ಗೆ ಸೂಕ್ತ ದೃಢೀಕೃತ ದಾಖಲಾತಿ ಲಗತ್ತಿಸಲಾಗಿದೆಯೇ?<br>**ವಿವರ :** | | |
| 9 | ಆಧಾರ್‌ಕಾರ್ಡ್‌ನ ದೃಢೀಕೃತ ಪ್ರತಿ ಲಗತ್ತಿಸಲಾಗಿದೆಯೇ? | | |
| 10 | ರೂ. 5/–ರ ಅಂಚೆ ಚೀಟಿ ಹಚ್ಚಿದ ಎರಡು 9"x4"ರ ಲಕೋಟೆಯನ್ನು ಲಗತ್ತಿಸಲಾಗಿದೆಯೇ? | | |
| 11 | ಯಾವ ವಾದ್ಯೋಪಕರಣದ **(Instrument)** ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಾರೆ?<br><br>**ವಾದ್ಯದ ಹೆಸರು :**<br><br>**ವಾದ್ಯವೃಂದದ ಹೆಸರು :** | | |

**ಅಭ್ಯರ್ಥಿಯ ಪೂರ್ಣ ಸಹಿ**

**(ಕಚೇರಿ ಉಪಯೋಗಕ್ಕೆ ಮಾತ್ರ)**

| | | |
|---|---|---|
| 1 | ಅರ್ಜಿಯು ತಿರಸ್ಕೃತಗೊಂಡಿದೆ / ಅಂಗೀಕೃತಗೊಂಡಿದೆ | |
| 2 | ಹಾಗೆ ತಿರಸ್ಕೃತಗೊಂಡಿದ್ದಲ್ಲಿ ಕಾರಣ | |
| ಎ) | ವಯಸ್ಸು ಪೂರ್ಣಗೊಂಡಿರುವುದಿಲ್ಲ / ವಯಸ್ಸು ಮೀರಿರುತ್ತದೆ. | |
| ಬಿ) | ಜನ್ಮ ದಿನಾಂಕ ಪ್ರಮಾಣಪತ್ರ ಲಗತ್ತಿಸಿರುವುದಿಲ್ಲ | |
| ಸಿ) | ಜಾತಿ ಪ್ರಮಾಣಪತ್ರ ಲಗತ್ತಿಸಿರುವುದಿಲ್ಲ. | |
| ಡಿ) | ಸಂಗೀತ ವಿದ್ಯಾರ್ಹತೆ ಬಗ್ಗೆ ಸೂಕ್ತ ದಾಖಲಾತಿ ಲಗತ್ತಿಸಿರುವುದಿಲ್ಲ. | |
| ಇ) | ಭಾವಚಿತ್ರ ಅಂಟಿಸಲಾಗಿರುವುದಿಲ್ಲ. | |

**ಪರಿಶೀಲಿಸುವ ಅಧಿಕಾರಿಯ ಸಹಿ ಮತ್ತು ಹೆಸರು**

**ಸದಸ್ಯ ಕಾರ್ಯದರ್ಶಿ**
**ನೇಮಕಾತಿ ಸಮಿತಿ.**

**PR-73**

**ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು - 577 101, ಕರ್ನಾಟಕ**
**OFFICE OF THE DEPUTY COMMISSIONER AND DISTRICT MAGISTRATE,.**

Tel.08262-230401(O), 230402(R), 231499(ADC), 235262(Rev.Sec.), 231222 (Fx.)
email:dcckmlr@gmail.com, deo.cmagalur@gmail.com

ಸಂಖ್ಯೆ ಇ ಎಲ್ ಎನ್ ಸಿ ಆರ್ 146/2022-23 ದಿನಾಂಕ:18-03-2023

## :: ಅಧಿಸೂಚನೆ::

(ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993 ಕಲಂ 4(2)ರಂತೆ)

ವಿಷಯ:- **ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನ ಬದಲಾವಣೆ**
ತರೀಕೆರೆ ತಾಲ್ಲೂಕು , ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ಕೇಂದ್ರಸ್ಥಾನವನ್ನು ಮಾಳಿಕೊಪ್ಪ ಗ್ರಾಮಕ್ಕೆ ಬದಲಾಯಿಸುವ ಕುರಿತು.

ಉಲ್ಲೇಖ:-
1) ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ರವರ ಕಛೇರಿ ಪತ್ರ ಸಂಖ್ಯೆ:ZP-CKM-12014 (16)/162/2022-DEVELOPMENT-CHIKKAMAGALUR/25983 ದಿನಾಂಕ:17-01-2023
2) ತಹಶೀಲ್ದಾರ್ ತರೀಕೆರೆ ರವರ ಪತ್ರ ಸಂಖ್ಯೆ: ಇಎಲ್‌ಎನ್/ಸಿ.ಆರ್/13/22-23 ದಿನಾಂಕ: 20-02-2023
3) ಈ ಕಛೇರಿ ಕರಡು ಅಧಿಸೂಚನೆ ಸಮಸಂಖ್ಯೆ ದಿನಾಂಕ: 03-03-2023
4) ತಹಸೀಲ್ದಾರ್ ತರೀಕೆರೆ ತಾಲ್ಲೂಕು ರವರ ಕಛೇರಿ ಪತ್ರ ಸಂಖ್ಯೆ: ಇಎಲ್ ಎನ್:ಸಿಆರ್:13/2022-23 ದಿನಾಂಕ:18-03-2023

*****

ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು, ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ಪ್ರಸ್ತುತ ಕೆಂಚಿಕೊಪ್ಪ ಗ್ರಾಮದಲ್ಲಿ ಕೇಂದ್ರಸ್ಥಾನವಾಗಿ ಕರ್ತವ್ಯವನ್ನು ನಿರ್ವಹಿಸುತಿದ್ದು, ಸದರಿ ಗ್ರಾಮ ಪಂಚಾಯಿತಿ ಕಛೇರಿ ಕಟ್ಟಡವು

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಶಿಥಿಲಾವಸ್ಥೆಯಲ್ಲಿರುವುದಲ್ಲದೇ ಹೆದ್ದಾರಿ ರಸ್ತೆ ಅಗಲೀಕರಣದಿಂದ ಕಛೇರಿ ಕಟ್ಟಡವು ಭೂಸ್ವಾಧೀನಕ್ಕೆ ಒಳಪಡುವ ಸಾಧ್ಯತೆ ಇರುತ್ತದೆಂದು ಮತ್ತು ಬದಲಿಯಾಗಿ ಕಛೇರಿ ನಿರ್ವಹಿಸಲು ಯಾವುದೇ ಕಟ್ಟಡಗಳ ಅಥವಾ ಕಟ್ಟಡ ನಿರ್ಮಿಸಲು ನಿವೇಶನ ಲಭ್ಯತೆ ಸಹಾ ಇರುವುದಿಲ್ಲವೆಂದು ತಿಳಿಸುತ್ತಾ, ಪಂಚಾಯಿತಿಯ ಕೇಂದ್ರ ಸ್ಥಾನವನ್ನು ಇದೇ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಾಗೂ ಕೆಂಚಿಕೊಪ್ಪ ಗ್ರಾಮ ಪಂಚಾಯಿತಿಯಿಂದ 200 ಮೀ ಅಂತರದಲ್ಲಿ ಬರುವ ಮಾಳಿಕೊಪ್ಪ ಗ್ರಾಮಕ್ಕೆ ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ಕೇಂದ್ರಸ್ಥಾನವನ್ನು ಬದಲಾಯಿಸಿಕೊಡುವಂತೆ ಉಲ್ಲೇಖ (1)ರಲ್ಲಿ ಪ್ರಸ್ತಾಪಿಸಲಾಗಿದೆ. ಈ ಬಗ್ಗೆ ಉಲ್ಲೇಖ(2) ರಂತೆ ತಹಶೀಲ್ದಾರ್ ತರೀಕೆರೆ ರವರು ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ಕೆಂದ್ರ ಸ್ಥಾನವನ್ನು ಮಾಳಿಕೊಪ್ಪ ಗ್ರಾಮಕ್ಕೆ ಬದಲಾಯಿಸುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧವಾಗಿ ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು ದಿನಾಂಕ 18/08/2022 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನವನ್ನು ಮಾಳಿಕೊಪ್ಪ ಗ್ರಾಮಕ್ಕೆ ಬದಲಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ. ಈ ಬಗ್ಗೆ ಕಾರ್ಯನಿರ್ವಹಣಾಧಿಕಾರಿ ತಾಲ್ಲೂಕು ಪಂಚಾಯಿತಿ, ತರೀಕೆರೆ ರವರು ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ಕೆಂದ್ರ ಸ್ಥಾನವನ್ನು ಮಾಳಿಕೊಪ್ಪ ಗ್ರಾಮಕ್ಕೆ ಬದಲಾಯಿಸುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಅಧಿಸೂಚನೆ ಸಂಖ್ಯೆ: ಇಎಲ್ ಎನ್ (3) ಸಿ ಆರ್ 08/2020-21 ದಿನಾಂಕ 24/07/2020 ರಂತೆ ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಕೆಂಚಿಕೊಪ್ಪ, ಮಾಳಿಕೊಪ್ಪ, ಮಂಡರವಳ್ಳಿ, ದೊಡ್ಡಕುಂದೂರು, ಕುಂದೂರು ಕಾವಲ್, ಲಕ್ಕವಳ್ಳಿ ಮನ್ನಾಜಂಗಲ್ ಗ್ರಾಮಗಳನ್ನು ಸೇರಿಸಿ ಗ್ರಾಮ ಪಂಚಾಯಿತಿಯಾಗಿ ರೂಪಿಸಿ, ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಜಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಅದರಂತೆ ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಾಳಿಕೊಪ್ಪ ಗ್ರಾಮವೂ ಸೇರಿದ್ದು, ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿಯೂ ಸಹಾ ಮಾಳಿಕೊಪ್ಪ ಗ್ರಾಮಕ್ಕೆ ಕೇಂದ್ರ ಸ್ಥಾನವನ್ನು ಬದಲಿಸಲು ಸಮ್ಮತಿ ಸೂಚಿಸಿರುವುದನ್ನು ಗಣನೆಗೆ ತೆಗೆದುಕೊಂಡು ಮತ್ತು ಸ್ಥಳೀಯ ಅಧಿಕಾರಿಗಳ ವರದಿಯಂತೆ ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನವನ್ನು ಮಾಳಿಕೊಪ್ಪ ಗ್ರಾಮಕ್ಕೆ ಬದಲಾಯಿಸುವುದು ಅವಶ್ಯವೆಂದು ಮನಗಂಡು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಕಲಂ 4(2) ರಡಿ ಪ್ರದತ್ತವಾಗಿರುವ ಅಧಿಕಾರದಡಿ ಕೆಂಚಿಕೊಪ್ಪ ಗ್ರಾಮ ಪಂಚಾಯಿತಿಯ ಕೇಂದ್ರಸ್ಥಾನವನ್ನು ಮಾಳಿಕೊಪ್ಪ ಗ್ರಾಮಕ್ಕೆ ಬದಲಿಸಿ ಉಲ್ಲೇಖ (3) ರಂತೆ ತಿದ್ದುಪಡಿ ಕರಡು ಅಧಿಸೂಚನೆಯನ್ನು ಹೊರಡಿಸಿ, ಆಕ್ಷೇಪಣೆಗಳನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಈ ಕುರಿತು ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನವನ್ನು ಮಾಳಿಕೊಪ್ಪ ಗ್ರಾಮಕ್ಕೆ ಬದಲಾಯಿಸುವ ಕುರಿತು ಯಾವುದೇ ಆಕ್ಷೇಪಣೆಗಳು ಸ್ವೀಕೃತಗೊಂಡಿರುವುದಿಲ್ಲವೆಂದು ಉಲ್ಲೇಖ (4) ರಲ್ಲಿ ತಹಸೀಲ್ದಾರ್ , ತರೀಕೆರೆ ತಾಲ್ಲೂಕುರವರು ವರದಿ ಸಲ್ಲಿಸಿರುತ್ತಾರೆ.

ಆದ್ದರಿಂದ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನವನ್ನು ಮಾಳಿಕೊಪ್ಪ ಗ್ರಾಮಕ್ಕೆ ಬದಲಾಯಿಸುವುದು ಅವಶ್ಯವೆಂದು ಮನಗಂಡು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಕಲಂ 4(2) ರಡಿ ಪ್ರದತ್ತವಾಗಿರುವ ಅಧಿಕಾರದಡಿ **ಕೆಂಚಿಕೊಪ್ಪ ಗ್ರಾಮ ಪಂಚಾಯಿತಿಯ ಕೇಂದ್ರಸ್ಥಾನವನ್ನು ಮಾಳಿಕೊಪ್ಪ ಗ್ರಾಮಕ್ಕೆ ಬದಲಿಸಿ ಈ ಅಧಿಸೂಚನೆಯನ್ನು ಹೊರಡಿಸಿದೆ**. ಕೆಂಚಿಕೊಪ್ಪ ಗ್ರಾಮಪಂಚಾಯಿತಿ ಕಛೇರಿಯನ್ನು ಮಾಳಿಕೊಪ್ಪ ಗ್ರಾಮದಲ್ಲಿ ಸೂಕ್ತಾನುಸಾರ ಸ್ಥಾಪಿಸಬಹುದಾಗಿದೆ ಉಳಿದಂತೆ ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಇಎಲ್ ಎನ್ (3) ಸಿಆರ್:08/2020-21 ದಿನಾಂಕ: 24/07/2020 ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

( ಕೆ ಎನ್ ರಮೇಶ್ . ಭಾ ಆ ಸೇ)
ಜಿಲ್ಲಾಧಿಕಾರಿ
ಚಿಕ್ಕಮಗಳೂರು ಜಿಲ್ಲೆ
ಚಿಕ್ಕಮಗಳೂರು

**PR-74**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY N M